ಇರುವ ತಪ್ಪು ಕಲ್ಪನೆಗಳು. ಸಿನಿಮಾ ವಾಸ್ತವಿಕ ಆಗಿರಬೇಕು ಎನ್ನುತ್ತಾರೆ. ಯಾಕೆ ವಾಸ್ತವಿಕವಾಗಿರಬೇಕು? ಒಬ್ಬ ನೃತ್ಯಗಾರ ತನ್ನ ಮುದ್ರೆಗಳ ಮೂಲಕ ಏನನ್ನೋ ಅಭಿವ್ಯಕ್ತಿಸುತ್ತಾನಲ್ಲ, ಹಾಗೆಯೇ ಸಿನಿಮಾದಲ್ಲಿ ಕೂಡ ನಿರ್ದೇಶಕ ಒಂದು ಈಡಿಯಂ ಮೂಲಕ ಹೇಳುತ್ತಿರುತ್ತಾನೆ' ಎಂದು ಸುದೀರ್ಘವಾಗಿಯೇ ವಿವರಿಸಿ ಸ್ವಲ್ಪ ವಿರಾಮರಾದರು.

ಈ ವಿರಾಮವನ್ನೇ ಬಳಸಿಕೊಂಡು ಪೈ ಅವರು ತಮ್ಮ ಹರೆಯದ ಕಾಲದಲ್ಲಿಯೂ ಈಗಿನ ಕಾಲಕ್ಕೂ ಇರುವ ಅಂತರಗಳ ಬಗ್ಗೆ ಮಾತು ಹೊರಳಿಸಿದರು. 'ಆಗ ಪ್ರತಿಯೊಂದು ಚಳವಳಿಗೂ ಒಂದು ಉತ್ಸಾಹ ಇತ್ತು. ಪ್ರತಿಯೊಬ್ಬರೂ ಆ ಚಳವಳಿಯಲ್ಲಿ ಉತ್ಸಾಹದಿಂದ ತೊಡಗಿಕೊಳ್ಳುತ್ತಿದ್ದರು. ಆದರೆ ಅದು ಈಗಿನ ಹುಡುಗರಲ್ಲಿ ಅಷ್ಟಾಗಿ ಕಾಣಿಸುತ್ತಿಲ್ಲ' ಎಂದು ತುಸು ನಿರಾಶಾದಾಯಕ ಧ್ವನಿಯಲ್ಲಿಯೇ ಅವರು ಹೇಳಿದರು. ಅವರ ಮಾತನ್ನು ಒಪ್ಪಿಕೊಂಡರೂ ಗಿರೀಶರಿಗೆ ಅಂತರಂಗದಲ್ಲಿ ಈ ಕುರಿತು ಕೆಲವು ಅನುಮಾನಗಳೂ ಇದ್ದವು. ಅದನ್ನು ಅವರು ಹೊರಹಾಕಿದ್ದು ಹೀಗೆ: 'ನೀವು ಹೇಳಿದ್ದು ನಿಜ. ಆದರೆ ಹೀಗೆ ಹೇಳುವಾಗಲೇ ನನಗೆ ಒಳಗೊಳಗೇ ಒಂದು ಅನುಮಾನವೂ ಕಾಡುತ್ತಿದೆ. ಚಳವಳಿಗಳೇ ಇಲ್ಲವೋ, ಅಥವಾ ಅದು ಈಗಲೂ ಇದ್ದು ನಾವೇ ಅದರಿಂದ ಹೊರಗಿದ್ದೇವೆಯೋ... ಈಗ ನಾವು ನಮ್ಮ ವಯೋಮಾನದ ಜನರ ಜತೆಗಷ್ಟೇ ಹೆಚ್ಚು ಒಡನಾಡುತ್ತಿರುತ್ತೇವೆ. ಆದರೆ ನಮಗಿಂತ ಕಡಿಮೆ ವಯಸ್ಸಿನ, ಈಗಿನ ಪೀಳಿಗೆಯವರ ಜತೆಗೆ ನಾವು ಎಷ್ಟು ತೊಡಗಿಕೊಳ್ಳುತ್ತೇವೆ? ನಿಜವಾಗಿಯೂ ಇಂದು ಚಳವಳಿ ಇದ್ದು, ಅದು ನಮಗಿಂತ ಬೇರೆ ಥರದಲ್ಲಿ ವ್ಯಕ್ತವಾಗುತ್ತಿದೆಯಾ ಎಂಬ ಅನುಮಾನ ನನ್ನನ್ನು ಬಹಳ ಕಾಡುತ್ತಿರುತ್ತದೆ' ಎಂದು ಚಳವಳಿಗಳ ಹೊಸ ಪರಿವೇಷವನ್ನು ಗುರ್ತಿಸಲಾಗದೇ ಹೋಗುತ್ತಿರುವ ಸಾಧ್ಯತೆಯ ಕುರಿತೂ ಅವರು ಗಮನ ಸೆಳೆದರು. ಈ ಅನುಮಾನ ಗೋಪಾಲಕೃಷ್ಣ ಪೈ ಅವರದ್ದೂ ಆಗಿತ್ತು. ಆದರೆ 'ಇಂದಿನ ಯುವಮನಸ್ಸುಗಳಿಗೆ ಸಮಾಜವನ್ನು, ಬದುಕನ್ನು ಇಡಿಯಾಗಿ ಗ್ರಹಿಸುವ ನೋಟ ಇಲ್ಲ' ಎನ್ನುವ ಮಾತಿನಲ್ಲಿ ಅವರಿಬ್ಬರಿಗೂ ಒಮ್ಮತವಿತ್ತು. ಹೊಸ ಪೀಳಿಗೆಯ ಜೀವನದೃಷ್ಟಿಯಲ್ಲಿ ಕಾಣುತ್ತಿರುವ ಈ ಸೀಮಿತತೆಗೆ ಕಾರಣವನ್ನು ಹುಡುಕುವ ಪ್ರಯತ್ನವನ್ನೂ ಕಾಸರವಳ್ಳಿ ಮಾಡಿದರು. ಅವರ ಪ್ರಕಾರ ಇಂದಿನ ಪರಿಸ್ಥಿತಿಯೇ ಹಾಗಿದೆ. 'ಇಂದು ಸಮಾಜವಾದ, ಮಾರ್ಕ್ಸ್‌ವಾದಗಳಲ್ಲಿ ನಾನು ನಂಬಿಕೆ ಉಳಿಸಿಕೊಂಡಿದ್ದರೆ ಜನರು ನನ್ನನ್ನು ಅನುಮಾನದಿಂದ ನೋಡುತ್ತಾರೆ. ಯಾಕೆಂದರೆ ಅವೆಲ್ಲ ಸಿದ್ಧಾಂತಗಳು ಜಗತ್ತಿನ ಎಲ್ಲ ಕಡೆಗಳಲ್ಲಿ ಪ್ರಾಯೋಗಿಕವಾಗಿ ವಿಫಲವಾಗಿವೆ. ಸುಮ್ಮನೇ ಸಿದ್ಧಾಂತಕ್ಕಾಗಿ ಸಿದ್ಧಾಂತ ಹೇಳಿಕೊಂಡಿದ್ದರೆ ಪ್ರಯೋಜನ ಇಲ್ಲ. ಅವುಗಳನ್ನು ಮರುವ್ಯಾಖ್ಯಾನಿಸುವ ಅಗತ್ಯ ಇದೆ. ಆದರೆ ಅಂಥ ಒಬ್ಬ ದಾರ್ಶನಿಕ ಇಂದಿನ ಪೀಳಿಗೆಯ ಎದುರು ಇಲ್ಲ' ಎನ್ನುವುದು ಅವರ ವಿಶ್ಲೇಷಣೆ.

ಇಷ್ಟು ಹೇಳಿದ ಕಾಸರವಳ್ಳಿ, 'ಈಗ ನಿಮ್ಮ ಪ್ರಯಾಣದ ಬಗ್ಗೆ ಮಾತಾಡೋಣ. ಬ್ಯಾಂಕಿನಿಂದ ಸಾಹಿತ್ಯಕ್ಕೆ ಬಂದು, ಕೊನೆಗೆ ಸಾಹಿತ್ಯ ಮುಂದಕ್ಕೆ ಹೋಗಿ ಬ್ಯಾಂಕ್ ಹಿಂದಕ್ಕೆ ಹೋದ ಕಥೆ ಹೇಳಿ' ಎಂದು ಪೈ ಅವರನ್ನು ಮಾತಿಗೆಳೆದರು. ಒಮ್ಮೆ ನಕ್ಕು ಗಡ್ಡ ನೀವಿಕೊಂಡ ಪೈ ಅದೊಂದು ಕಥೆಯೇ ಎನ್ನುವಂತೆ ಹೇಳತೊಡಗಿದರು.

'ನಾನು ಹೊಟ್ಟೆಪಾಡಿಗಾಗಿ ಬ್ಯಾಂಕ್‌ಗೆ ಸೇರಿದ್ದು. ಆದರೆ ನನಗೆ ಮೊದಲಿನಿಂದಲೂ ಸಾಹಿತ್ಯದಲ್ಲಿ ಆಸಕ್ತಿ ಇತ್ತು. ನನಗೆ ಸಿಕ್ಕಿದ ಮೇಷ್ಟ್ರು ಸಹ ಅಂಥವರೇ ಆಗಿದ್ದರು. ಬೆಂಗಳೂರಿಗೆ ಬಂದಾಗ ಕವಿ ಗೋಪಾಲಕೃಷ್ಣ ಅಡಿಗರ ಒಡನಾಟವೂ ಸಿಕ್ಕಿತು. ಆಗ ನವ್ಯ ಸಾಹಿತ್ಯ